ಪಗಡಿ ಹಾಕೆ ಪೋರಿ ತ್ರಿಗುಣಗಳೆಲ್ಲ ಮಾರಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 368.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Prof. S.K. Ramachandra Rao and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ನಾದನಾಮಕ್ರಿಯ ತಾಳ: ಆದಿ

ಪಗಡಿ ಹಾಕೆ ಪೋರಿ
ತ್ರಿಗುಣಗಳೆಲ್ಲ ಮಾರಿ || ಪ ||

ನೇಮದ ಸೀರೆಯನುಟ್ಟು ನಿನ್ನ
ಕಾಮದ ಕಚ್ಚೆಯ ಕಟ್ಟು
ಪ್ರೇಮದ ಸಜ್ಜನರೊಳಗೆ ನಿಂತು
ಮಾತನಾಡೋಣ ಬಾರೆ || 1 ||

ಹಿಂದಕೆ ಹೋಗಲುಬೇಡ ನೀ
ಮುಂದಕೆ ಬಂದು ನಿಲ್ಲು
ಹಿಂದಿನ ಮುಂದಿನ ಹಂಬಲ ಬಿಟ್ಟು
ಒಂದಾಟ ಆಡೋಣ ಬಾರೆ || 2 ||

ತೊಡೆಯ ತೆರೆಯಬೇಡ ನಿ-
ನ್ನೊಡೆಯನು ನಗುತಾನೆ
ತೊಡೆಯ ತೆರೆದು ತೋರಿದರೆ
ನಾಚಿಕೊಂಬರಲ್ಲೆ || 3 ||

ನೇಮ ನಿಷ್ಠೆಯ ನೀಗಿ ಅದು
ಸಾಮ-ದಾನವಾಗಿ
ಝಾಮ ಝಾಮ ಉಸಿರು ಬಿಡದೆ
ಆಟವಾಡೋಣ ಬಾರೆ || 4 ||

ಪಗಡಿ ಎಂಬುದು ಅಲ್ಲ
ಪುಗಡಿ ಎಂಬುದು ಸೊಲ್ಲ
ಪಗಡಿ ಸೊಗಸು ಪುರಂದರ
ವಿಠಲನೊಬ್ಬ ಬಲ್ಲ || 5 ||

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:

ಪುಗಡಿ = ಮಕ್ಕಳು ಆಡುವ ಒಂದು ರೀತಿಯ ಆಟ. ಸುತ್ತುತ್ತಾ ತಿರುಗುತ್ತಾ ಆಡುವ ಆಟ.

Classification: Mundige
Ankita: purandara vittala
Location: NA
Category: Jeevanoddhara.
Sub-Category: pagadi, ATa, hennu, prema, nage, nachike.
Pravachana: Smt. Vanaja Narsapur, Vijayapura.
Explanation: NA